ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಈ ಪಾರ್ಟಿ ಒಳಗಾದರೂ ಪಾರವಳ್ಳಿ; ಹಿರೇಜಂಬೂರು ಕೆಲಸ ಪೂರ್ಣ ಮಾಡುತ್ತೀರಾ ಎಂದು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ. ಎರಡನೆಯದು, ಚರ್ಚುಗುಂಡಿಯಲ್ಲಿ ಟ್ಯಾಂಕ್ ಕಟ್ಟುತ್ತಿರುವುದು ಸರಿಯಲ್ಲ ಎಂದು ಆದು ಪ್ರಾರಂಭ ವಾದಾಗಲೇ ಆ ಊರಿನ ಜನರು ವಿರೋಧ ಮಾಡಿದರು. ನಾನೂ ದೂರು ಕೊಟ್ಟಿದ್ದೆ. ಸಂಬಂಧ ಪಟ್ಟ ಅಧಿಕಾರಿಗಳು ಸರಿಯಾಗಿ ಇದನ್ನು ಮಾಡುವ ಪ್ರಯತ್ನ ಮಾಡಿದ್ದಿದ್ದರೆ ೧೯೮೪ರಿಂದ ಕೆಲಸ ನಿಂತು ಈ ಸ್ಥಿತಿಗೆ ಬರಬೇಕಾಗಿತ್ತೇ ? ಕೃಷ್ಣರಾಜಸಾಗರಕ್ಕೆ ಪರೀಕ್ಷೆ ಮಾಡಲು ಕಾಂಕ್ರೀಟನ್ನು ಯಾವ ತಾರೀಖಿನಂದು ಕಳುಹಿಸಿಕೊಟ್ಟಿದ್ದೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕ ಹಳ್ಳಿ ಯವರ ಮತ್ತು ಶಾಸಕರ ಕ್ಷಮೆಯನ್ನು ನಾನು ಮೊದಲು ಕೇಳುತ್ತೇನೆ. ೧೯೮೪ರಲ್ಲಿ ಈ ಕೆಲಸ ನಿಂತಿದೆ. ೧೯೮೬ರಲ್ಲಿ ಕೆ.ಆರ್.ಎಸ್.ಗೆ ಪರೀಕ್ಷೆ ಮಾಡುವುದಕ್ಕೆ ಕಾಂಕ್ರೀಟನ್ನು ಕಳುಹಿಸಿದ್ದೇವೆ. ಅಲ್ಲಿಂದ ಪರದಿ ಬಂದನಂತರ ಮುಂದಿನ ಕ್ರಮಕೈಗೊಳ್ಳುತ್ತೇವೆ, ನಿಧಾನವಾಗಿರುವುದಕ್ಕಾಗಿ ಆ ಗ್ರಾಮದ ಜನರ, ಶಾಸಕರ ಕ್ಷಮೆ ಕೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮೊದಲನೆ ಎರಡು ಕೆಲಸಗಳನ್ನು ಪಾರ್ಟಿಯೊಳಗಾದರೂ ಮುಗಿಸಿಕೊಡುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಆಯವ್ಯಯದಲ್ಲಿ ಎಷ್ಟು ಹಣ ಇದೆಯೋ ಗೊತ್ತಿಲ್ಲ. ಪೂರ್ತಿ ಹಣ ಇದ್ದರೆ ಮುಗಿಸಿಕೊಡುತ್ತೇನೆ. ಕಡಿಮೆ ಇದ್ದರೆ ಏಪ್ರಿಲ್ ಮೇ ನಲ್ಲಿ ಈ ಕೆಲಸ ಚಾಲು ಮಾಡುವ ಹಾಗೆ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ತಪ್ಪನ್ನು ಕೇಳುವುದು ವಿಶೇಷವಾಗಿ ಚರ್ಚುಗುಂಡಿ ಗ್ರಾಮದ ಬಗ್ಗೆ. ನಮ್ಮ ರಾಜ್ಯದಲ್ಲಿ ಅನೇಕ ಕಡೆ ಪೈಪ್ ವಾಟರ್‌ಸಪ್ಲೈ ಟ್ಯಾಂಕುಗಳನ್ನು ಏನು ಕಟ್ಟುತ್ತಿದ್ದಾರೆ ಅಲ್ಲೆಲ್ಲಾ ಸರಿಯಾಗಿ ಕೆಲಸ ಮಾಡದೆ ಟ್ಯಾಂಕುಗಳು ನೋಡುತ್ತಿವೆ ಎಂದು ದೂರುಗಳು ಬರುತ್ತಿವೆ. ನಾನು ನಿರ್ದಿಷ್ಟವಾದ ಉದಾಹರಣೆ ಕೊಟ್ಟಿರುವುದರಿಂದ ಸರಿಯಾಗಿ ಸಿಮೆಂಟ್ ಉಪಯೋಗಿಸದೆ ಅಸಮರ್ಪಕ ಕೆಲಸವಾಗಿರುವುದರಿಂದ ಒಳ್ಳೆಯ ರೀತಿ ಟ್ಯಾಂಕ್ ಕಟ್ಟುವಂತೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ನನ್ನ ಗಮನಕ್ಕೆ ಬಂದಿದೆ. ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

ಸವದತ್ತಿ ತಾಲ್ಲೂಕಿನಲ್ಲಿ ಕೊರೆಯಲಾದ ಕೊಳವೆ ಬಾವಿಗಳು

೧೬೦ (೨೯೫) ಚಂದ್ರಶೇಖರ ಮಾಮನಿ (ಸವದತ್ತಿ).—ಮಾನ್ಯ ಗ್ರಾಮಾಭಿವೃದ್ಧಿ ಮಂತ್ರಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ಕೊರೆದ ಬಾವಿಗಳನ್ನು ಹಾಕಲಾಗಿದೆ ?

ಆ) ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಎಷ್ಟು ಕೊರೆದ ಬಾವಿಗಳನ್ನು ಹಾಕಲಾಗಿದೆ ?

ಇ) ಇದೇ ಪ್ರಕಾರ ಸವದತ್ತಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಯು ಯಾವ ಹಂತದಲ್ಲಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ, ಪಂಚಾಯತ್ ಮತ್ತು ಪಕ್ಷ ಮಂತ್ರಿಗಳು).—

ಅ) ನವೆಂಬರ್ ೧೯೮೬ ಕೊನೆಯವರೆಗೆ ಒಟ್ಟು ೧, ೧೭, ೨೦೪ ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ರಾಜ್ಯದಲ್ಲಿ ಹಾಕಲಾಗಿದೆ.

ಆ) ೫೦೭ (ನವೆಂಬರ್ ೮೬ರ ಕೊನೆಯವರೆಗೆ)

ಇ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನಲ್ಲಿ ಇದುವರೆಗೂ ೩೭ ಗ್ರಾಮಾಂತರ ನಳದ ನೀರು ಸರಬರಾಜು ಯೋಜನೆಗಳು ಸರ್ಕಾರದ ಅನುಮೋದನೆ ಪಡೆದಿವೆ. ಅವುಗಳ ಪೈಕಿ ೩೨

ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಇನ್ನುಳಿದ ೫ ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿ ನೀಡಬೇಕಾಗಿದೆ.

ಮಂಜೂರಾದ ೩೨ ಯೋಜನೆಗಳ ಪೈಕಿ ೨೧ ಯೋಜನೆಗಳು ಪೂರ್ಣಗೊಂಡಿವೆ ಆವುಗಳನ್ನು ನಿರ್ವಹಣೆಗಾಗಿ ಸಂಬಂದಿಸಿದ ಗ್ರಾಮ ಪಂಚಾಯ್ತಿಗಳಿಗೆ ವಹಿಸಿದೆ. ಒಂದು ಯೋಜನೆಯಲ್ಲಿ ತಾತ್ಕಾಲಿಕವಾಗಿ ನೀರವಾಗಿ ನೀರು ಸರಬರಾಜು ಮಾಡಲಾಗುತ್ತಿದೆ. ಇದು ಪೂರ್ಣಗೊಳ್ಳುವ ಹಂತದಲ್ಲಿದೆ. ಉಳಿದ ಯೋಜನೆಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ.

ಇದಲ್ಲದೆ, ಈ ತಾಲ್ಲೂಕಿಗೆ ಇಮುದರೆಗೂ ೨೫ ಕಿರು ನೀರು ಸರಬರಾಜು ಯೋಜನೆಗಳು ಮಂಜೂರಾಗಿದ್ದು ಆವುಗಳಲ್ಲಿ ೧೮ ಪೂರ್ಣಗೊಂಡು ನೀರು ಸರಬರಾಜು ಆಗುತ್ತಿದೆ. ಒಂದು ಪ್ರಗತಿಯಲ್ಲಿದ್ದು ಉಳಿದ ಆರು ಯೋಜನೆಗಳಿಗೆ ಅವಲಂಬಿಸುವ ಜಲಮೂಲವನ್ನು ಸ್ಥಿರಪಡಿಸುವ ಕೆಲಸ ಪ್ರಗತಿಯಲ್ಲಿದೆ.

ಶ್ರೀ ಚಂದ್ರಶೇಖರ್ ಮಾಮನಿ...ನನ್ನ ಎರಡನೆ ಪ್ರಶ್ನೆಗೆ ೫೦೭ ಕೊಳವೆ ಬಾವಿಗಳನ್ನು ಹಾಕಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದರೆ ಅದರಲ್ಲಿ ಉಪಯೋಗವಾಗುವ ಕೊಳವೆ ಬಾವಿಗಳೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸಕ್ಷಸ್‌ಫುಲ್ ಆಗಿರುವಂತಹ ಕೊಳವೆ ಬಾವಿಗಳ ಸಂಖ್ಯೆ ಎಷ್ಟು.

ಶ್ರೀ ಚಂದ್ರಶೇಖರ ಮಾಮನಿ.—೩೭ ಗ್ರಾಮಂತರ ನಳದ ನೀರು ಸರಬರಾಜು ಯೋಜನೆಗಳಿಗೆ ಸರ್ಕಾರದ ಅನುಮೋದನೆ ಪಡೆದಿದ್ದು, ಅವುಗಳ ಪೈಕಿ ೩೨ ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿ ದೊರೆತಿದೆ ಎಂಬುದಾಗಿ ಹೇಳಿದ್ದಾರೆ. ಇವುಗಳನ್ನು ಯಾವಾಗ ಮುಗಿಸಬಹುದು ಎಂಬುದನ್ನು ಕೇಳಬಹುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ತಾಂತ್ರಿಕ ಮಂಜೂರಾತಿ ಹಾಗೂ ಆಡಳಿತಾತ್ಮಕ ಮಂಜೂರಾತಿ ಕೊಟ್ಟಮೇಲೆ ಮಂಜೂರಾಗಿರುವಂತಹ ಇಂತಹ ಯೋಜನೆಗಳನ್ನು ೩ ವರ್ಷಗಳಲ್ಲಿ ಮುಗಿಸಬೇಕೆಂಬ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಹಣದ ಸಂಪನ್ಮೂಲ ಒದಗಿದ ಹಾಗೆ ಈ ಕೆಲಸಗಳನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಶ್ರೀ ಯಂ. ಭೂಪತಿ.—ಪ್ರ.ಸಂ.೧೬೧(೩೪೩) ಮಾನ್ಯ ಸದಸ್ಯರು ಗೈರುಹಾಜರಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮತ್ತೊಂದು ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ಅದು ಯೋಜನಾ ಹಂತದಲ್ಲಿದೆ. ಈ ರಾಜ್ಯದಲ್ಲಿ ಸುಮಾರು ೨೦ ಸಾವಿರ ಬೀಡಿ ಕಾರ್ಮಿಕರಿಗೆ ಎಲ್ಲೆಲ್ಲಿ ವಸತಿ ಸೌಕರ್ಯ ಇಲ್ಲವೋ ಅಲ್ಲೆಲ್ಲಾ, ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕೆಂಬ ಬೃಹತ್ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ.

ಶ್ರೀ ವಿನಯಕುಮಾರ್ ಸೊರ್ಕೆ.—ಈಗಾಗಲೇ ಆ ಯೋಜನೆ ಇದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಯೋಜನೆ ಇದೆ, ಅದು ಬರೀ ಕಾಗದದಲ್ಲಿ ಮಾತ್ರ. ವರ್ಷಕ್ಕೆ ೧೦೦ ಮನೆಗಳೂ ಆಗುತ್ತಿಲ್ಲ. ಇದನ್ನು ಕಾರ್ಯಗತ ಮಾಡುವವರು ನಾವಲ್ಲ. ಯಾರು ಯೋಜನೆಯನ್ನು ತಯಾರು ಮಾಡುತ್ತಾರೋ ಅವರು. ಅವರು ಯೋಜನೆಯನ್ನು ತಯಾರು ಮಾಡಿ ನಮಗೆ ಕಳುಹಿಸುತ್ತಾರೆ. ಕೇಂದ್ರ ಸರ್ಕಾರದಲ್ಲಿ ಸಾಕಷ್ಟು ಹಣ ಇದೆ, ಅದನ್ನು ಕೊಡಿ, ಎಂಬುದಾಗಿ ಕೇಳುತ್ತಿದ್ದೇನೆ. ಶ್ರೀ ರಘುನಾಥ ರೆಡ್ಡಿಯವರು ಮಂತ್ರಿಗಳಾಗಿದ್ದಾಗ ನಾನೂ ವೆಲ್‌ಫೇರ್ ಬೋರ್ಡಿನ ಸದಸ್ಯನಾಗಿದ್ದೆ. ನನಗೂ ಗೊತ್ತಿದೆ. ಅಲ್ಲಿ ಬಹಳಷ್ಟು ಹಣ ಇದೆ ಎಂದು ಅದನ್ನು ಕೊಡಿ ಎಂಬುದಾಗಿ ಯೋಜನೆಯನ್ನು ತಯಾರು ಮಾಡಿ ಕಳುಹಿಸುತ್ತಿದ್ದೇನೆ. ಇಪತ್ತು ೨೦ ಸಾವಿರ ಮನೆಗಳನ್ನು ಕಟ್ಟುವ ಬಗ್ಗೆ ಬೃಹತ್ ಯೋಜನೆ ಮಾಡುತ್ತಿದ್ದೇವೆ. ನಮಗೆ ಬೇಕಾಗಿರತಕ್ಕ ಹಣವನ್ನು ಬಿಡುಗಡೆ ಮಾಡಿ ಎಂದು ೭೨ ರಿಂದ ಕೇಂದ್ರವನ್ನು ಕೇಳಿದ್ದೇವೆ. ಆ ಪತಿಯಿಂದ ಆಗಿರತಕ್ಕದ್ದು ೪೫೦ ಮನೆಗಳು ಮಾತ್ರ. ಇವೊತ್ತು ಇದರ ಬಗ್ಗೆ ಮಾಸ್ಟರ್ ಪ್ಲಾನ್ ತಯಾರು ಮಾಡುತ್ತಿದ್ದೇವೆ. ಪುರಸಭೆ ಮತ್ತು ಗ್ರಾಮ ಮಟ್ಟದಲ್ಲಿ ಬೀಡಿ ಕಾರ್ಮಿಕರಿಗೆ ಸಾಕಷ್ಟು ಗುಂಪು ಮನೆ ಕಟ್ಟತಕ್ಕ ಬಗ್ಗೆ ವಸತಿಯನ್ನು ಕಲ್ಪಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಬರೆದಿದ್ದೇವೆ. ಅಲ್ಲದೇ

ಗ್ರಾಮೀಣ ಪ್ರದೇಶದಲ್ಲಿ ಈ ವರ್ಷ ಅಥವಾ ಮುಂದಿನ ವರ್ಷ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ನನ್ನ ಇಲಾಖೆಯ ವತಿಯಿಂದ ೧೦ ಸಾವಿರ ಆರ್. ಸಿ. ಸಿ. ಮನೆಗಳನ್ನು ಕಟ್ಟುತಕ್ಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಸಚಿವರ ಲೆಕ್ಕದ ಪ್ರಕಾರ ೪೦,೩೦೫ ಜನತಾ ಮನೆಗಳಿಗೆ ೧೦೩೯.೯೦ ಲಕ್ಷ ರೂಪಾಯಿಗಳಾದರೆ, ನಗರ ಪ್ರದೇಶದ ಯೋಜನೆಯಲ್ಲಿ ಸುಮಾರು ೧೫ ಸಾವಿರ ಮನೆಗಳಿಗೆ ೮,೫೫೫.೯೩ ಲಕ್ಷ ರೂಪಾಯಿಗಳಾಗುತ್ತವೆ. ಎಂದರೆ ಗ್ರಾಮಾಂತರ ಪ್ರದೇಶಕ್ಕೆ ಒದಗಿಸುವ ಹಣವನ್ನು ಲೆಕ್ಕ ಹಾಕಿದರೆ ನಗರ ಪ್ರದೇಶಕ್ಕೆ ೮ ಪಟ್ಟು ಹೆಚ್ಚು ಹಣವನ್ನು ಅಂದಾಜು ಮಾಡಲಾಗಿದೆ. ನಿಮ್ಮ ಲೆಕ್ಕದ ಪ್ರಕಾರವೇ ಒಂದೊಂದು ತಾಲ್ಲೂಕಿಗೆ ೨೦೦ ಮನೆಗಳು ಮಾತ್ರ ಬರುತ್ತವೆ. ಇವೊತ್ತು ಒಂದೊಂದು ತಾಲ್ಲೂಕಿನಲ್ಲಿ ೧೦ ಸಾವಿರ ಮನೆಗಳಿಗೆ ಬೇಡಿಕೆ ಇದೆ. ಬೀಡಿ ಕಾರ್ಮಿಕರ ಬಗ್ಗೆ ಪ್ರಸ್ತಾಪ ಮಾಡಿದರೆ ನಮ್ಮ ಸ್ನೇಹಿತರು ಅವರಿಗೆ ಸೆಂಟ್ರಲ್ ಗೌರ್ನಮೆಂಟ್ ಹಣ ಕೊಡುತ್ತದೆ ಎಂದು ಹೇಳುತ್ತಾರೆ. ಆ ಬಗ್ಗೆ ಸ್ಕೀಮ್ ಇದೆ ಎಂದು ೩ ವರ್ಷಗಳಿಂದ ಹೇಳುತ್ತಿದ್ದಾರೆ. ಆದರೆ ಇನ್ನೂ ಕೂಡಾ ಹಣ ಕೊಟ್ಟಿಲ್ಲ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ತಮ್ಮ ಮಾತನ್ನು ನಾನು ಒಪ್ಪುತ್ತೇನೆ. ಇವತ್ತು ಪಟ್ಟಣ ಪ್ರದೇಶದಲ್ಲಿ ಎ.ಐ.ಜಿ., ಎಲ್.ಐ.ಜಿ. ಹೈಯರ್ ಇನ್‌ಕಂ ಗ್ರೂಪ್‌ಗಳ ಮನೆಗಳಿಗೆ ೧೫ ಸಾವಿರ, ೨೦ ಸಾವಿರ ರೂಪಾಯಿಗಳು ಬರುತ್ತದೆ. ಆದರೆ ಹಳ್ಳಿಗಳಲ್ಲಿ ೬ ಸಾವಿರ ರೂಪಾಯಿಗಳನ್ನು ಜನತಾ ಮನೆಗಳಿಗೆ ಕೊಡಲಾಗುತ್ತದೆಯೇ ಹೊರತು ಅದಕ್ಕಿಂತ ಹೆಚ್ಚು ಕೊಡುತ್ತಾ ಇಲ್ಲ. ಆ ದೃಷ್ಟಿಯಿಂದ ಬೇಡಿಕೆ ಜಾಸ್ತಿ ಇದೆ. ಒಟ್ಟಿಗೆ ಪಂಚವಾರ್ಷಿಕ ಯೋಜನೆಯಲ್ಲಿ ಎರಡೂವರೆ ಕೋಟಿ ಯೂನಿಟ್ ಬೇಕೆಂದು ಅಂದಾಜು ಮಾಡಿದ್ದಾರೆ. ಹಾಗೂ ಈ ಬಗ್ಗೆ ಒನೇ ಯೋಜನೆಯಲ್ಲಿ ೧೫ ಲಕ್ಷ ಮನೆಗಳನ್ನು ಕಟ್ಟುತಕ್ಕ ಕಾರ್ಯಕ್ರಮವನ್ನು ಹಾಕಿದ್ದಾರೆ. ಇವತ್ತು ಬೇಡಿಕೆ ಅಸಾಧ್ಯವಾಗಿ ಇದೆ. ಹಾಗೂ ಸಂಪನ್ಮೂಲದ ಕೊರತೆ ಕೂಡಾ ಹೆಚ್ಚು ಇದೆ. ಬರೀ ರಾಜ್ಯ ಸರ್ಕಾರವೇ ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ಈ ಕೊರತೆಯನ್ನು ಪೂರ್ತಿಯಾಗಿ ನೀಗತಕ್ಕ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ. ಬೀಡಿ ಕಾರ್ಮಿಕರ ಬಗ್ಗೆ ಎಂದು ಯೋಜನೆ ಇದೆ. ಆದಕ್ಕೆ ಕೇಂದ್ರ ಸರ್ಕಾರ ಕೊಡುವುದು ಮೂರೂವರೆ ಸಾವಿರ ರೂಪಾಯಿಗಳ ಸಬ್ಸಿಡಿ. ಉಳಿದ ಸಂಪನ್ಮೂಲವನ್ನು ಎಂದರೆ ಉಳಿದ ೧೦ ಸಾವಿರವನ್ನು ಲೋನ್ ಮೂಲಕ ಪಡೆದುಕೊಳ್ಳುವುದಕ್ಕೆ ಯೋಜನೆ ತಯಾರು ಮಾಡಬೇಕಾಗುತ್ತದೆ. ಆದ್ದರಿಂದ ಈ ರಾಜ್ಯದಲ್ಲಿ ಇದು ಪ್ರಗತಿ ಆಗಿಲ್ಲ. ಆ ದೃಷ್ಟಿಯಿಂದ ಈ ವರ್ಷ ೨೦ ಸಾವಿರ ಬೀಡಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಒಂದು ಯೋಜನೆ ತಯಾರು ಮಾಡುವುದಕ್ಕೆ ಆಜ್ಞೆ ಮಾಡಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಇವತ್ತು ನಿಮ್ಮ ಲೆಕ್ಕದ ಪ್ರಕಾರವೇ ಪ್ರತಿಯೊಂದು ತಾಲ್ಲೂಕಿನಲ್ಲಿ ಕೇವಲ ೨೦೦ ಮನೆಗಳನ್ನು ಕೊಡಲಿಕ್ಕೆ ಆಗುತ್ತದೆ. ಆದುದರಿಂದ ೫೦೦ ಮನೆಗಳಷ್ಟಾದರೂ ಆಗುವ ಬಗ್ಗೆ ಈ ಯೋಜನೆಯನ್ನು ವಿಸ್ತರಿಸಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಸಂಪನ್ಮೂಲ ಒದಗಿದರೆ ಒಂದು ತಾಲ್ಲೂಕಿಗೆ ೧೦ ಸಾವಿರ ಮನೆಗಳಾದ ಪಕ್ಷದಲ್ಲಿ ನನ್ನಷ್ಟು ಆನಂದ ಪಡುವವರು ಮತ್ತೊಬ್ಬರು ಇರಲಾರರು. ಇವತ್ತು ಸಂಪನ್ಮೂಲವನ್ನು ನಾವು ನೋಡಬೇಕಾಗುತ್ತದೆ.

ರಾಜ್ಯದಲ್ಲಿ ಕೊರೆಯಲಾದ ಕೊಳವೆ ಬಾವಿಗಳು

೧೬೩ (೧೦ ಸಿ) ಶ್ರೀ ಗೋಪಾಲ ಮುಕುಂದ ಕಾನಡೆ (ಖಾನಾಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಪ್ರಸಕ್ತ ಸರಕಾರ ಅಸ್ತಿತ್ವಕ್ಕೆ ಬಂದನಂತರ ರಾಜ್ಯದಲ್ಲಿ ಒಟ್ಟು ಎಷ್ಟು ಕೊಳವೆ ಬಾವಿಗಳನ್ನು ತೆಗೆಸಲಾಗಿದೆ?

ಆ) ಆ ಪೈಕಿ ಕುಡಿಯುವ ನೀರಿನ ಕೊಳವೆ ಬಾವಿಗಳೆಷ್ಟು ಹಾಗೂ ನೀರಿಲ್ಲದೆ ಅಸಫಲಗೊಂಡ ಕೊಳವೆ ಬಾವಿಗಳೆಷ್ಟು?

ಇ) ಒಂದು ಕೊಳವೆ ಬಾವಿಗೆ ಖರ್ಚಾಗುವ ಹಣವೆಷ್ಟು?

ಈ) ಇದರಲ್ಲಿ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಪಾಲೆಷ್ಟು?